ಮಾತನಾಡಿದ ನೇತಾಜಿ, 'ಫ್ರೆಂಚ್ ಭಾರತೀಯರು, ಬ್ರಿಟಿಷ್ ಭಾರತೀಯರು, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಎಂಬ ಭೇದಗಳನ್ನೆಲ್ಲಾ ಬಿಟ್ಟು ಭಾರತೀಯರೆಂದು ನಾವುಗಳು ಒಗ್ಗೂಡಿ ಹೋರಾಡಬೇಕು' ಎಂದು ಕರೆಕೊಟ್ಟರು. ಇಂಫಾಲ್‌ನ ಸೋಲು ತಾತ್ಕಾಲಿಕ, ಜಪಾನಿ ಸೇನೆಯ ಜೊತೆಗೂಡಿ ಐ.ಎನ್.ಎ. ಯುದ್ಧಮಾಡಿ ಭಾರತವನ್ನು ಸ್ವತಂತ್ರಗೊಳಿಸಲಿದೆ ಎಂದು ವಿವರಿಸಿದರು. ಆದರೆ ವಾಸ್ತವ ಬೇರೆಯಾಗಿತ್ತು. ಅವರ ಸೈನ್ಯ ಭಾರತ ಪ್ರವೇಶಿಸುವುದು ಅಸಾಧ್ಯವಾಗಿತ್ತು. ಸಂಜೆ ಜಪಾನಿ ಸಚಿವ ಎಸ್. ತಶಿರೋ ಏರ್ಪಡಿಸಿದ್ದ ಭೋಜನಕೂಟದಲ್ಲಿ ಬೋಸ್ ಪಾಲ್ಗೊಂಡರು. ಚಟರ್ಜಿ ದೇಣಿಗೆ ಸಂಗ್ರಹಣೆಗಾಗಿ ಸೈಗಾನ್‌ನಲ್ಲಿಯೇ ಉಳಿದುಕೊಂಡರೆ, ಬೋಸ್ ಮತ್ತು ಸಹಚರರು ಸಿಂಗಪುರಕ್ಕೆ ಪ್ರಯಾಣ ಬೆಳೆಸಿದರು.

## ಬರ್ಮಾದಲ್ಲಿ ಬೋಸ್ ಜನ್ಮದಿನಾಚರಣೆ

1945ರ ಜನವರಿ 23ರಂದು ಬೋಸ್ ತಮ್ಮ 48ನೇ ಜನ್ಮದಿನವನ್ನು ಬರ್ಮಾದಲ್ಲಿ ಆಚರಿಸಿಕೊಂಡರು. ಅಲ್ಲಿನ ಭಾರತೀಯರು ನೇತಾಜಿ ತೂಕದ ಒಂದೂವರೆ ಪಟ್ಟು, ಅಂದರೆ ಸುಮಾರು 150 ಕೆ.ಜಿ.ಯಷ್ಟು ಚಿನ್ನ ಮತ್ತು ಒಡವೆಗಳನ್ನು ದೇಣಿಗೆಯಾಗಿ ನೀಡಿದರು. ಅದನ್ನವರು ಆಜಾದ್ ಹಿಂದ್ ಬ್ಯಾಂಕಿಗೆ ಒಪ್ಪಿಸಿದರು. ಬ್ಯಾಂಕಾಕ್‌ನಲ್ಲೂ ನೇತಾಜಿಯವರಿಗೆ ಅವರ ತೂಕದಷ್ಟು ಚಿನ್ನವನ್ನು ಜನರು ಕೊಟ್ಟಿದ್ದರಂತೆ.

ಕೊಹಿಮಾ ಮತ್ತು ಇಂಫಾಲದ ಸೋಲು ದುಬಾರಿಯಾಗಿ ಪರಿಣಮಿಸಿತ್ತು. ಜಪಾನೀಯರ 65 ಸಾವಿರ ಸೈನಿಕರು ಹಾಗೂ ಐ.ಎನ್.ಎ. ಕಡೆಯ 2 ಸಾವಿರ ಸೈನಿಕರು ತಮ್ಮ ಜೀವ ಕಳೆದುಕೊಂಡಿದ್ದರು. ಅದಕ್ಕಾಗಿ ಜಪಾನೀಯರು ಬೋಸರಿಗೆ, ಅವರ ಕೇಂದ್ರ ಕಚೇರಿಯನ್ನು ಬರ್ಮಾದಿಂದ ಸೈಗಾನ್‌ಗೆ ವರ್ಗಾಯಿಸುವಂತೆ ಹೇಳಿದರು.

1945ರ ಮೇ 3ರಂದು ರಂಗೂನ್ ಬ್ರಿಟಿಷರ ಕೈವಶವಾಯಿತು. ಮೇ 7ರಂದು ಜರ್ಮನಿ ಶರಣಾಯಿತು. ಇತ್ತ ರಷ್ಯ ಕೂಡ ಜಪಾನ್ ವಿರುದ್ಧ ಯುದ್ಧ ಘೋಷಿಸಿತು. ಬರ್ಮಾ ಮಿತ್ರ ಸೈನ್ಯದ ಕೈವಶವಾದೊಡನೆಯೇ, ಅಲ್ಲಿದ್ದ ಐ.ಎನ್.ಎ. ಸೈನಿಕರು ಶರಣಾದರು. ಇಂಡೊ–ಚೀನಾದಲ್ಲಿ ಈಗ ಫ್ರೆಂಚರ ಆಧಿಪತ್ಯ ಹೆಚ್ಚುತ್ತಾ ಜಪಾನೀಯರಿಗೆ ಬಿಕ್ಕಟ್ಟಿನ ಪರಿಸ್ಥಿತಿ ಮೂಡಿತ್ತು. ಫ್ರೆಂಚರು ಮಿತ್ರ ಸೈನ್ಯದ ಜೊತೆಗಿದ್ದುದು ಐ.ಎನ್.ಎ.ಗೂ ಅಭದ್ರತೆ ಉಂಟುಮಾಡಿತ್ತು.

## ಏಕಾಂಗಿಯಾದ ಜಪಾನ್

ನಾಜಿ ಜರ್ಮನಿ ಗುಂಪಿನಲ್ಲಿದ್ದ ಎಲ್ಲ ದೇಶಗಳೂ ಸೋತು, ಜಪಾನ್ ಒಬ್ಬಂಟಿಯಾಯಿತು. ಫ್ರೆಂಚರು ಮಿತ್ರಪಡೆಗಳ ಸಹಾಯ ಪಡೆದು ಪ್ರಬಲರಾಗಬಹುದೆನ್ನುವ ಆತಂಕದಿಂದ ಜಪಾನ್, 1945ರ ಮಾರ್ಚ್ 9ರಂದು ಸೈಗಾನ್‌ನಲ್ಲಿನ ಗವರ್ನರ್ ಅರಮನೆ ಸೇರಿದಂತೆ ಎಲ್ಲಾ ಸರ್ಕಾರಿ ಕಚೇರಿಗಳನ್ನೂ ಜಪಾನೀಯರು ಆಕ್ರಮಿಸಿಕೊಂಡರು. ಫ್ರೆಂಚ್ ಶಾಲೆಗಳನ್ನು ಮುಚ್ಚಿದರು. ಫ್ರೆಂಚ್ ಸೈನಿಕರನ್ನು ಬಂಧಿಸಿ, ಸರ್ಕಾರಿ ಹುದ್ದೆಗಳಲ್ಲಿದ್ದ ಫ್ರೆಂಚರನ್ನು ಬದಲಿಸಿ ಸ್ಥಳೀಯರನ್ನು ಭರ್ತಿ ಮಾಡಲಾಯಿತು. ಫ್ರೆಂಚ್ ಮಿಲಿಟರಿ ದಾಖಲೆಗಳನ್ನು ನಾಶಪಡಿಸಿದರು.

ಸೈಗಾನ್‌ನಲ್ಲಿನ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಮರುಸಂಘಟಿಸಲಾಯಿತು. ಅಧ್ಯಕ್ಷರಾಗಿ ಶೇಖ್ ಮಹಮ್ಮದ್ ಮುಂದುವರೆದರೆ, ಕಾರ್ಯದರ್ಶಿಯಾಗಿ ಜಿ. ರಾಮನಾಥನ್, ಖಜಾಂಚಿಯಾಗಿ ಕೊಮರಪ್ಪ ಚೆಟ್ಟಿ ಆಯ್ಕೆಯಾದರು. ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಲಿಯಾನ್ ಪ್ರೌಚಂಡಿ, ಕರುಣಾಕರನ್ ಮತ್ತು ಖಲೀಲೂರ್ ರೆಹಮಾನ್ ಇದ್ದರು.

1945ರ ಜುಲೈನಲ್ಲಿ ಸೈಗಾನ್‌ನಲ್ಲಿ 'ಆಜಾದ್ ಹಿಂದ್' ವಾರಪತ್ರಿಕೆ ಫ್ರೆಂಚ್ ಭಾಷೆಯಲ್ಲಿ ಪ್ರಾರಂಭವಾಯಿತು. ಮೊದಲ ಪ್ರತಿ 1945ರ ಜುಲೈ 6ರಂದು ಹೊರಬಂತು. ಲಿಯಾನ್ ಪ್ರೌಚಂಡಿ, ಇದರ ಹಿಂದೆ ಇದ್ದು ಕೆಲಸ ಮಾಡುತ್ತಿದ್ದರು. ತಮಿಳು ಭಾಷೆಯಲ್ಲಿಯೂ 'ಆಜಾದ್ ಹಿಂದ್' ಹೊರತರಲಾಯಿತು. ರೇಡಿಯೊ ಪ್ರಸಾರ ಸಹ ಪ್ರಾರಂಭಿಸಲಾಯಿತು. ಅದರಲ್ಲಿ ಧ್ವನಿ ನೀಡುತ್ತಿದ್ದವರು, ಖಲೀಲೂರ್ ರೆಹಮಾನ್, ಜಿ. ರಾಮನಾಥನ್ ಮತ್ತು ಕರುಣಾಕರನ್.

## ಸೈಗಾನ್‌ನಲ್ಲಿ ಐ.ಐ.ಎಲ್ ಕಚೇರಿ

1945ರ ಹೊತ್ತಿಗೆ ಸೈಗಾನ್‌ನಲ್ಲಿ 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್' ಕೇಂದ್ರ ಕಚೇರಿಯನ್ನು 76 ರೂ ಪೌಲ್ ಬ್ಲಾಂಚಿ ರಸ್ತೆಯಲ್ಲಿದ್ದ ದೊಡ್ಡ ಬಂಗಲೆಗೆ ವರ್ಗಾಯಿಸಿದ್ದರು. ಪ್ರೌಚಂಡಿ ಕುಟುಂಬಕ್ಕೆ ಸೇರಿದ್ದ ಈ ಬಂಗಲೆಯನ್ನು ಲಿಯಾನ್ ಪ್ರೌಚಂಡಿ, 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'ಗೆ ಉಚಿತವಾಗಿ ನೀಡಿ, ತಮ್ಮ ಕುಟುಂಬದವರೊಂದಿಗೆ ಔಟ್ ಹೌಸ್‌ನಲ್ಲಿ ವಾಸಿಸುತ್ತಿದ್ದರು. ಈ ಬಂಗಲೆಯ ಮೇಲೆ ಭಾರತ, ಜಪಾನ್ ಮತ್ತು ವಿಯೆಟ್ನಾಮೀ (ವಿಯೆಟ್ ಮಿನ್) ಧ್ವಜಗಳನ್ನು ಹಾರಿಸಲಾಗಿತ್ತು. ದ್ವಾರದಲ್ಲಿ 'ಐ.ಎನ್.ಎ.' ಸೈನಿಕರು ಕಾವಲು ಕಾಯುತ್ತಿರುತ್ತಿದ್ದರು.



ಸ್ವಾತಂತ್ರ್ಯ–ಸ್ವಾಭಿಮಾನದ ಸಂಕೇತದಂತೆ ಭಾಸವಾಗುವ ನೋಯ್ಡಾದಲ್ಲಿನ ನೇತಾಜಿ ಪ್ರತಿಮೆ